ಸರ್ಕಾರದ ವತಿಯಿಂದ ಸಂಬಂಧಪಟ್ಟ ಕಡತವನ್ನು ಕೂಡಲೇ ಕಳುಹಿಸುವಂತೆ ಕೋರಿ ನಂ. ಆರ್‌ಡಿ ೨೩ ಎಲ್ ಜಿ ಒ ೯೦ ದಿನಾಂಕ. ೫-೫-೯೦ರಲ್ಲಿ ಕೊಡಗಂ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿತ್ತು. ಜಿಲ್ಲಾಧಿಕಾರಿಗಳು ದಿನಾಂಕ.೧೫-೬-೯೦ ರಂದು ಹಾಗೂ ಸಂಬಂಧಪಟ್ಟ ಕಡತವನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಈ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಜಿ. ಎಸ್. ರಾಜೂಗೌಡ (ಸದಸ್ಯರು ಗೈರು ಹಾಜರಾಗಿದ್ದರು).—

೫. ಬೈಂದೂರು ಹೆಮ್ಮಾಡಿ ಮತ್ತು ಹಾಲಾಡಿ ಸ್ಥಳಗಳಲ್ಲಿ ವಿದ್ಯುತ್ ಸಬ್ ಸ್ಟೇಷನನ್ನು ಸ್ಥಾಪಿಸಲು ಒತ್ತಾಯ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಯ ಮುರ್ಡೇಶ್ವರಗಳ ನಡುವೆ ವಿದ್ಯುತ್ ಸಬ್ ಸ್ಟೇಶನ್ ಇಲ್ಲ. ಪರಿಣಾಮವಾಗಿ ಭಟ್ಕಳದಿಂದ ದಕ್ಷಿಣಕ್ಕೆ, ನಾವುಂದದಿಂದ ಉತ್ತರಕ್ಕೆ ವೋಲ್ಟೇಜ್ ಇಲ್ಲದೆ ವಿದ್ಯುದ್ದೀಪಗಳಿಗೆ ಅಂಧತ್ವ ಬರುತ್ತದೆ. ಪಂಪುಸೆಟ್ಟುಗಳಿಗೆ, ಚಿಕ್ಕ ಉದ್ದಿಮೆಗಳಿಗೆ ಪಾರ್ಶ್ವವಾತ ಬರುತ್ತದೆ. ಇದನ್ನು ಹೋಗ ಲಾಡಿಸಲು 'ಬೈಂದೂರು' ಬಳಿ ಸಬ್ ಸ್ಟೇಶನ್ ಮಂಜೂರಾಗಿದ್ದರೂ ಕಾರ್ಯಾರಂಭವಾಗಿಲ್ಲ, ಅದೇ ರೀತಿ ಕುಂದಾಪುರ ತಾಲ್ಲೂಕಿನ ಹೆಮ್ಮಾಡಿ, ಹಾಲಾಡಿಗಳಲ್ಲಿ ಸಬ್ ಸ್ಟೇಶನ್ ಸ್ಥಾಪನೆಯ ಅವಶ್ಯಕತೆ ಇದೆ. ಇರುವ ವಿದ್ಯುತ್ತನ್ನು ಸಮರ್ಪಕವಾಗಿ ಸಾರ್ವಜನಿಕ ಉಪಯೋಗಕ್ಕೆ ನೀಡುವ ಸಲುವಾಗಿ ಈ ವ್ಯವಸ್ಥೆ ಯನ್ನು ಬೇಗನೆ ಒದಗಿಸಲು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್(ವಿದ್ಯುತ್ ಸಚಿವರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಮಾನ್ಯ ಕೈಗಾರಿಕಾ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.—

ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಮತ್ತು ನಾವುಂದ ಮತ್ತು ಅವುಗಳ ಸುತ್ತ ಮುತ್ತ ಪ್ರದೇಶಗಳಲ್ಲಿನ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಇರುವುದು ಮಂಡಳಿಯ ಗಮನಕ್ಕೆ ಬಂದಿದೆ. ಈ ಕಡಿಮೆ ವೋಲ್ಟೇಜ್ ನಿವಾರಿಸಲು ಮತ್ತು ವಿದ್ಯುತ್ ಸರಬರಾಜಿನ ಸ್ಥಿತಿಯನ್ನು ಸುಧಾರಿಸಲು ಬೈಂದೂರಿನಲ್ಲಿ ಒಂದು ೩೩×೧೧ ಕೆ.ವಿ ವಿದ್ಯುತ್ ಸಬ್ ಸ್ಟೇಷನ್ ಅನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ವಿದ್ಯುತ್ ಸಬ್ ಸ್ಟೇಷನ್ ಅನ್ನು ೫ ಎಂ.ವಿ.ಎ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ನೊಂದಿಗೆ ನಿರ್ಮಾಣ ಮಾಡಲು ೫ ಲಕ್ಷ ರೂ. ಗಳನ್ನು ಒದಗಿಸಿದೆ. ಈ ಸಬ್ ಸ್ಟೇಷನ್ ಅನ್ನು ನಿರ್ಮಿಸಲು ಬೇಕಾಗಿರುವ ಭೂಮಿಯನ್ನು ಈಗಾಗಲೇ ಸ್ವಾಧೀನ ಪಡಿಸಿಕೊಳ್ಳಲಾಗಿದೆ ಮತ್ತು ಅಗತ್ಯವಿರುವ ಎಲ್ಲಾ ಸಾಮಗ್ರಿಗಳನ್ನು ಒದಗಿಸಲಾಗಿದ್ದು, ಟ್ರಾನ್ಸ್‌ಫಾರ್ಮರ್ ಇನ್ನೆರಡು ತಿಂಗಳೊಳಗೆ ಸರಬರಾಜಾಗುವ ನಿರೀಕ್ಷೆ ಇದೆ. ಮತ್ತು ಈ ಸಬ್ ಸ್ಟೇಷನ್‌ನ ಕಾರ್ಯ ಈ ಸಾಲಿನ(೧೯೯೦-೯೧) ಅಂತ್ಯದೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಕುಂದಾಪುರದಿಂದ ಬೈಂದೂರಿಗೆ ೩೪ ಕಿಲೋಮೀಟರ್ ಉದ್ದದ ೩೩ ಕೆ.ವಿ. ಟ್ರಾನ್ಸ್‌ಮಿಷನ್ ಲೈನನ್ನು ನಿರ್ಮಾಣ ಮಾಡಲು ೨೨ ಲಕ್ಷ ರೂ ಗಳನ್ನು ಒದಗಿಸಿದೆ. ಈ ಕೆಲಸಕ್ಕೆ ಬೇಕಾಗಿರುವ ಎಲ್ಲಾ ಸಾಮಾಗ್ರಿಗಳು ದೊರೆತಿದೆ. ನಿರ್ಮಾಣ ಕಾರ್ಯವನ್ನು ಗುತ್ತಿಗೆದಾರರಿಗೆ ಜೂನ್ ೧೯೯೦ರಲ್ಲಿ ಪಹಿಸ ಲಾಗಿತ್ತು. ಆದರೆ ಸದರಿ ಗುತ್ತಿಗೆದಾರನು ಕೆಲಸವನ್ನು ನಿರ್ವಹಿಸದೇ ಇದ್ದುದರಿಂದ ಅವರಿಗೆ ಅಂತಿಮ ನೋಟೀಸನ್ನು ನೀಡಿ ದಿನಾಂಕ ೫-೪-೧೯೯೧ ರಂದು ಗುತ್ತಿಗೆಯನ್ನು ರದ್ದು ಪಡಿಸಲಾಯಿತು. ಈಗ ಈ ಕಾರ್ಯವನ್ನು ಮರು ಟೆಂಡರ್ ಕರೆದಿದ್ದು ಕೆಲಸವನ್ನು ಬೇರೆ ಗುತ್ತಿಗೆದಾರರಿಗೆ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಕುಂದಾಪುರ ತಾಲ್ಲೂಕಿನ ಹಾಲಾಡಿಯಲ್ಲಿ, ಶಿವಮೊಗ್ಗ – ಹಿರಿಯಡಕ ೧೧೦ ಕೆ.ವಿ. ಲೈನಿನಿಂದ ೧ ಕಿಲೋಮೀಟರ್ ಉದ್ದದ ಲೈನನ್ನು ಟ್ಯಾಪ್ ಮಾಡಿ ೫ ಎಂ.ವಿ ಎ. ಸಾಮರ್ಥ್ಯದ ಟ್ರಾನ್ಸ್‌ ಫಾರ್ಮರ್‌ನೊಂದಿಗೆ ಒಂದು ೧೧೦ ಕೆ.ವಿ. ಟ್ಯಾಪ್ ಆಫ್ ಸ್ಟೇಷನ್‌ನನ್ನು ನಿರ್ಮಾಣ ಮಾಡಲು ಸಹ ಯೋಜಿಸಲಾಗಿದೆ. ಈ ಕಾಮಗಾರಿಯನ್ನು ಮಂಡಳಿಯ ಎಂಟನೇ ಪಂಚ ವಾರ್ಷಿಕ ಯೋಜನೆಯಲ್ಲಿ ನಿರ್ವಹಿಸುವ ಕಾರ್ಯಗಳಲ್ಲಿ ಸೇರಿಸಲಾಗಿದ್ದು, ಈ ಕೆಲಸವನ್ನು ಎಂಟನೇ ಪಂಚವಾರ್ಷಿಕ ಯೋಜನೆ ಯಡಿಯಲ್ಲಿ ನಿರ್ವಹಿಸಲಾಗುವುದು. ಕುಂದಾಪುರ ತಾಲ್ಲೂಕಿನ ಹೆಮ್ಮಾಡಿಯಲ್ಲಿ ವಿದ್ಯುತ್ ಸಬ್ ಸ್ಟೇಷನ್ ನಿರ್ಮಾಣ ಮಾಡುವ ಯೋಜನೆ ಮಂಡಳಿಯ ಮುಂದಿಲ್ಲ.